18

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪುಟ್ಟಣ್ಣ ಇವರು ಮಂಡಿಸಿರುವ ನಿಯಮ 330ರ ನಿಯಮದ ಮೇರೆಗೆ ಸೂಚನೆಗೆ ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರ ಹೇಳಿಕೆ:**

* * *

ವಿಷಯ:- ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರನ್ನು ಪ್ರಾಂಶುಪಾಲರ ಹುದ್ದೆಗೆ ಬಡ್ತಿ ನೀಡುವ ಸಂಬಂದ ಹಲವು ತಿಂಗಳುಗಳ ಹಿಂದೆಯೇ ಅರ್ಹ ಇರುವ ಉಪನ್ಯಾಸಕರುಗಳ ಜೇಷ್ಠತಾ ಪಟ್ಟಿಯನ್ನು ಅಂತಿಮಗೊಳಿಸಿ ಸರ್ಕಾರದ ಹಂತದಲ್ಲಿ ಇಲಾಖಾ ಪದೋನ್ನತಿ ಸಮಿತಿ ಸಭೆ ಸೇರಿ ಬಡ್ತಿ ಸಂಬಂದ ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳದೆ ವಿನಾ ಕಾರಣ ವಿಳಂಬ ಮಾಡುತ್ತಿರುವುದರಿಂದ ಹಲವಾರು ಉಪನ್ಯಾಸಕರು ಒಂದು ಪದೋನ್ನತಿಯಿಲ್ಲದೆ ನಿವೃತ್ತಿ ಹೊಂದುತ್ತಿದ್ದಾರೆ. ಆದ್ದರಿಂದ ಈಗಾಗಲೇ ಅಂತಿಮಗೊಳಿಸಿರುವ ಪಟ್ಟಿಯಲ್ಲಿನ ಉಪನ್ಯಾಸಕರುಗಳಿಗೆ ಖಾಲಿ ಇರುವ ಎಲ್ಲ ಪ್ರಾಂಶುಪಾಲರ ಹುದ್ದೆಗಳನ್ನು ಪ್ರಕಟಿಸಿ ಕೂಡಲೇ ಪ್ರಾಂಶುಪಾಲರ ಹುದ್ದೆಗೆ ಪದೋನ್ನತಿ ನೀಡಬೇಕೆಂಬ ವಿಷಯವನ್ನು ನಿಯಮ 330ರಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರಲ್ಲಿ ಪ್ರಸ್ತಾಪಿಸುತ್ತೇನೆ.

**ಉತ್ತರ:**

ಶಾಲಾ ಶಿಕ್ಷಣ ಇಲಾಖೆ (ಸರ್ಕಾರಿ ಪದವಿ ಪೂರ್ವ ಕಾಲೇಜು)ಗಳ ಉಪನ್ಯಾಸಕರನ್ನು ಪ್ರಾಂಶುಪಾಲರ ಹುದ್ದೆಗೆ ಬಡ್ತಿ ನೀಡುವ ಕರಿತು ನಿರ್ದೇಶನಾಲಯದ ದಿನಾಂಕ:04-09-2019 ಹಾಗೂ ದಿನಾಂಕ:04-03-2024ರಂದು ಪ್ರಕಟಿಸಲಾಗಿದ್ದ, ಅಂತಿಮ ಜೇಷ್ಠತಾ ಪಟ್ಟಿಯನುಸಾರ ಕಾರ್ಯನಿರ್ವಹಿಸುತ್ತಿರುವ ಅರ್ಹ ಉಪನ್ಯಾಸಕರಿಗೆ ಪ್ರಾಂಶುಪಾಲರ ಹುದ್ದೆಗೆ ಮುಂಬಡ್ತಿಗಾಗಿ ನಿರ್ದೇಶನಾಲಯದ ಜ್ಞಾಪನ ಸಂಖ್ಯೆ:1236832 DPUE-EST10PROM/12/2023, ದಿನಾಂಕ:08-12-2023ರಲ್ಲಿ ಬಡ್ತಿ ಕೋಟಾದಡಿ ಖಾಲಿ ಇರುವ ಮತ್ತು ಖಾಲಿಯಾಗಲಿರುವ ಹುದ್ದೆಗಳಿಗೆ ಮುಂಬಡ್ತಿ ನೀಡಲು ಶಾಲಾ ಶಿಕ್ಷಣ ಇಲಾಖೆಯ (ಪದವಿ ಪೂರ್ವ) ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅರ್ಹ ಉಪನ್ಯಾಸಕರಿಗೆ ವ್ಯಕ್ತಿ ಪೂರ್ವೋತ್ತರ ದಸ್ತಾವೇಜುಗಳನ್ನು ಸಲ್ಲಿಸಲು ದಿನಾಂಕ: 08-02-2023ರ ಜ್ಞಾಪನದಲ್ಲಿ ಅಹ್ವಾನಿಸಲಾಗಿತ್ತು.

ಉಪನ್ಯಾಸಕರಿಂದ ಪ್ರಾಂಶುಪಾಲರ ಹುದ್ದೆಯ ಬಡ್ತಿಗೆ ಸಂಬಂಧಿಸಿದಂತೆ ಉಳಿಕೆ ಮೂಲ ವೃಂದದ 300 ಉಪನ್ಯಾಸಕರ ಮತ್ತು ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ 61 ಉಪನ್ಯಾಸಕರ ಅಗತ್ಯ ವ್ಯಕ್ತಿಪೂರ್ವೋತ್ತರ ದಸ್ತಾವೇಜುಗಳೊಂದಿಗೆ ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ(ಪದವಿ ಪೂರ್ವ)ರವರು ದಿನಾಂಕ:07-03-2024ರಂದು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದರು.

ದಿನಾಂಕ:12-03-2024ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಉಪನ್ಯಾಸಕರಿಂದ ಪ್ರಾಂಶುಪಾಲರ ಹುದ್ದೆಯ ಬಡ್ತಿಗೆ ಇಲಾಖಾ ಮುಂಬಡ್ತಿ ಸಮಿತಿ ಸಭೆಯನ್ನು ನಡೆಸಲಾಗಿತ್ತು.

ಈ ಮಧ್ಯೆ ಜಂಟಿ ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ ಸಚಿವಾಲಯ ಇವರ ದಿನಾಂಕ:14-03-2024ರ ಅರೆ ಸರ್ಕಾರಿ ಪತ್ರದಲ್ಲಿ ಉಪನ್ಯಾಸಕರ ವೃಂದದಿಂದ ಪ್ರಾಂಶುಪಾಲರ ವೃಂದಕ್ಕೆ ಮುಂಬಡ್ತಿ ನೀಡುವ ಸಂದರ್ಭಗಳಲ್ಲಿ ಮೀಸಲಾತಿಯನ್ನು ಪಾಲಿಸದಿರುವ ಕುರಿತು ಸಮಾಜ ಕಲ್ಯಾಣ, ಸಿಬ್ಬಂದಿ ಆಡಳಿತ ಸುಧಾರಣೆ ಹಾಗೂ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಗಳು ಒಟ್ಟಾಗಿ ಪರಿಶೀಲಿಸಿ ಬ್ಯಾಕ್‌ಲಾಗ್ ಹುದ್ದೆಗಳನ್ನು ಗುರುತಿಸುವವರೆಗೂ ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ಪ್ರಾಂಶುಪಾಲರ ವೃಂದಕ್ಕೆ ಸಂಬಂಧಪಟ್ಟಂತೆ ಯಾವುದೇ ಮುಂಬಡ್ತಿ ಪ್ರಕ್ರಿಯೆಯನ್ನು ನಡೆಸಬಾರದೆಂದು ತಿಳಿಸಿದ್ದರು.

ಅದರಂತೆ, ದಿನಾಂಕ:03-04-2024ರಂದು ಸರ್ಕಾರದ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಸಭೆಯನ್ನು ನಡೆಸಿ, ಈ ಕುರಿತಂತೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹಾಗೂ ಸಮಾಜ ಕಲ್ಯಾಣ ಇಲಾಖೆಯೊಂದಿಗೆ ಚರ್ಚಿಸಲಾಗಿರುತ್ತದೆ. ಶಾಲಾ ಶಿಕ್ಷಣ ಇಲಾಖೆ(ಪದವಿ ಪೂರ್ವ)ಯಲ್ಲಿನ ಉಪನ್ಯಾಸಕರ ವೃಂದದಿಂದ ಪ್ರಾಂಶಪಾಲರ ವೃಂದಕ್ಕೆ ಮುಂಬಡ್ತಿ ನೀಡುವಲ್ಲಿ ಉಂಟಾಗಿರುವ ಬ್ಯಾಕ್‌ಲಾಗ್ ಹುದ್ದೆಗಳು ಮತ್ತು ಮೀಸಲಾತಿ ರೋಸ್ಟರ್ ಬಗ್ಗೆ ಸರ್ಕಾರದ ಆದೇಶ ಸಂಖ್ಯೆ:ಡಿಪಿಎಆರ್ 22 ಎಸ್‌ಬಿಸಿ 1979 ದಿನಾಂಕ:30-08-1979ರಂತೆ ಹಾಗೂ ಸರ್ಕಾರದ ಆದೇಶ ಸಂಖ್ಯೆ:ಡಿಪಿಎಆರ್ 21 ಎಸ್‌ಬಿಸಿ 1997 ದಿನಾಂಕ:03-02-1999ರನ್ವಯ ಹಾಗೂ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಸುತ್ತೋಲೆಗಳನ್ವಯ ಉಪನ್ಯಾಸಕರ ವೃಂದದಿಂದ ಪ್ರಾಂಶಪಾಲರ ವೃಂದಕ್ಕೆ ಮುಂಬಡ್ತಿ ನೀಡುವಾಗ ಇಲಾಖಾ ಮುಂಬಡ್ತಿ ಸಮಿತಿ ಸಭೆಯಲ್ಲಿ ನಿರ್ಣಯಿಸಿ, ಕ್ರಮಕೈಗೊಳ್ಳಲಾಗಿದ್ದು, ಯಾವುದೇ ಬ್ಯಾಕ್‌ಲಾಗ್ ಹುದ್ದೆಗಳು ಇರುವುದಿಲ್ಲವೆಂದು ಖಚಿತಪಡಿಸಿಕೊಂಡಿದೆ.

ಉಪನ್ಯಾಸಕರಿಂದ ಪ್ರಾಂಶುಪಾಲರ ವೃಂದಕ್ಕೆ ಬಡ್ತಿ ನೀಡುವ ಕುರಿತಂತೆ ಕ್ರಮವಹಿಸಲು ಬಡ್ತಿಗೆ ಅರ್ಹವಿರುವುದಾಗಿ ಈಗಾಗಲೇ ಇಲಾಖಾ ಮುಂಬಡ್ತಿ ಸಮಿತಿಯು ಶಿಫಾರಸ್ಸು ಮಾಡಿರುವ 302 ಉಪನ್ಯಾಸಕರುಗಳಿಗೆ ಬಡ್ತಿ ನೀಡಬೇಕಾಗಿರುತ್ತದೆ. ಆದರೆ, ಇಲಾಖಾ ಮುಂಬಡ್ತಿ ಸಮಿತಿ ಸಭೆ ನಡೆದು ಸುಮಾರು ಒಂದು ವರ್ಷದ ಸಮಯವಾಗಿರುವುದರಿಂದ, ಇಲಾಖಾ ಮುಂಬಡ್ತಿ ಸಭೆ ನಡೆದ ದಿನಾಂಕ:12-03-2024ರಿಂದ ಇಲ್ಲಿಯವರೆಗೆ ಸದರಿ ಉಪನ್ಯಾಸಕರುಗಳ ಇತ್ತೀಚಿನ ವಾರ್ಷಿಕ ಕಾರ್ಯನಿರ್ವಹಣಾ ವರದಿಗಳೊಂದಿಗೆ ಹಾಗೂ ಸದರಿ ಉಪನ್ಯಾಸಕರುಗಳ ವಿರುದ್ಧ ಯಾವುದೇ ಇಲಾಖಾ ವಿಚಾರಣೆ/ಕ್ರಿಮಿನಲ್ ಮೊಕದ್ದಮೆ ಹೂಡಲಾಗಿದೆಯೇ, ಮೀಸಲಾತಿ ಬಗ್ಗೆ ಮಾಹಿತಿ ಮತ್ತು ಈ ಪೈಕಿ ನಿವೃತ್ತಿಯಾದವರ ಉಪನ್ಯಾಸಕರುಗಳ ಮಾಹಿತಿ/ವಿವರಗಳನ್ನು ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ(ಪದವಿ ಪೂರ್ವ) ರವರಿಂದ ಪಡೆಯಲು ಕ್ರಮವಹಿಸಲಾಗುತ್ತಿದೆ.

(ಎಸ್. ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

ಸಂಖ್ಯೆ: ಇಪಿ 121 ಡಿಜಿಡಬ್ಲ್ಯೂ 2025